# ಪಿನ್ನು ಮಾಡದ ನೋಟುಗಳನ್ನು ಮಾತ್ರ ಸ್ವೀಕರಿಸುವಂತೆ, ಆರ್‌ಬಿಐ ಸಾರ್ವಜನಿಕರಿಗೆ ಮನವಿ ಮಾಡುತ್ತದೆ.

## ಜೂನ್ 5, 2003

ಪತ್ರಿಕಾ ಮಾಧ್ಯಮದ ಕೆಲವೊಂದು ವಿಭಾಗಗಳು, ದಿನಾಂಕ 5ನೇ ಜೂನ್ 2003ರಂದು ತಮ್ಮ ವೃತ್ತ ಪತ್ರಿಕೆಗಳಲ್ಲಿ, ಪಿನ್ನು ಮಾಡದ ನೋಟುಗಳಲ್ಲಿ ಮಾತ್ರವೇ ನಗದಿನ ಸ್ವೀಕೃತಿ ಮತ್ತು ಸಂದಾಯ ಮಾಡಬೇಕೆಂಬುದಕ್ಕೆ ಸಂಬಂಧಿಸಿದಂತೆ, 7ನೇ ನವೆಂಬರ್ 2001ರಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನವನ್ನು ಕಾರ್ಯಗತಗೊಳಿಸದಿರುವ ಬಗ್ಗೆ, ಇರುವ ಕೆಲವೊಂದು ತೊಂದರೆಗಳು ಮತ್ತು ಸಮಸ್ಯೆಗಳು ಹಾಗೂ ನ್ಯಾಯಸಮ್ಮತ ಕಾರಣಗಳ ಮೇಲೆ, ವರದಿಗಳನ್ನು ಪ್ರಕಟಿಸಿದವು.

ಪತ್ರಿಕಾ ವರದಿಯು ವಾಸ್ತವವಾಗಿಲ್ಲದಿದ್ದುದರಿಂದಾಗಿ ಹಾಗೂ ತಪ್ಪಿಸಬಹುದಾದ ಗೊಂದಲಗಳನ್ನು ನಿವಾರಿಸಲು, ರಿಸರ್ವ್ ಬ್ಯಾಂಕು, ನವೆಂಬರ್ 2001ರಂದು, ನಿರ್ದೇಶನಾತ್ಮಕ ಹಾಗೂ ಪರಿಣಾಮಕಾರಿ ಮಾರ್ಗದರ್ಶನಗಳನ್ನು ಹೊರಡಿಸಿತ್ತು ಎಂದು ಸ್ಪಷ್ಟೀಕರಿಸಿದೆ. ಈ ನಿರ್ದೇಶನದಲ್ಲಿ, ಅದು ಇತರ ವಿಷಯಗಳ ಜೊತೆ, ನೋಟು ಎಣಿಸುವ ಮತ್ತು ನೋಟು ಬ್ಯಾಂಡಿಂಗ್ ಯಂತ್ರಗಳನ್ನು ಪಡೆಯಲು ಬ್ಯಾಂಕ್‌ಗಳಿಗೆ ತಿಳಿಸಿತ್ತು. ಈ ರೀತಿ, ರಿಸರ್ವ್ ಬ್ಯಾಂಕು, ಅವಶ್ಯಕ ಮೂಲಭೂತ ಸೌಕರ್ಯಗಳು ಮತ್ತು ಕಾರ್ಯವಿಧಾನಗಳನ್ನು ರೂಪಿಸಲು, ಬ್ಯಾಂಕ್‌ಗಳಿಗೆ ಸಾಕಷ್ಟು ಹೆಚ್ಚಿನ ಸಮಯವನ್ನು ನೀಡಿತು. ನೋಟು ಬ್ಯಾಂಡಿಂಗ್ ಯಂತ್ರಗಳು, ನೋಟು ಪ್ಯಾಕೆಟ್ಟುಗಳನ್ನು ಸಮತಲವಾಗಿ ಮತ್ತು ಲಂಬವಾಗಿ ಎರಡೂ ಕಡೆ, ಭದ್ರವಾಗಿ ಕಟ್ಟುತ್ತದೆ ಮತ್ತು ಯಾರೊಬ್ಬರೂ, ಕೇವಲ ಒಂದು ನೋಟನ್ನು ಕೂಡಾ ತೆಗೆದುಕೊಳ್ಳಲು ಸಾಧ್ಯವಾಗದಂತೆ ಮಾಡುತ್ತದೆ. ಪ್ರಾಸಂಗಿಕವಾಗಿ, ಆದರೆ ಗಮನಾರ್ಹವಾಗಿ ರಿಸರ್ವ್ ಬ್ಯಾಂಕಿನೊಂದಿಗೆ ವ್ಯವಹರಿಸುವ ಸರ್ಕಾರದ ಎಲ್ಲಾ ಇಲಾಖೆಗಳು ಎಂದರೆ, ರೈಲ್ವೆ, ಅಂಚೆ ಇಲಾಖೆ, ಸೀಮಾಸುಂಕ ಇಲಾಖೆ, ಪ್ರಾದೇಶಿಕ ಪಾಸ್ ಪೋರ್ಟ್ ಕಚೇರಿ ಮತ್ತು ಕ್ಷೀರ/ಹಾಲು ಆಯುಕ್ತರ ಕಚೇರಿ, ಅಶ್ಯೂರೆನ್ಸ್ ರಿಜಿಸ್ಟ್ರಾರ್, ಕೊಲ್ಕತ್ತ ಕಲೆಕ್ಟೊರೇಟ್ ರೀತಿಯ ರಾಜ್ಯ ಸರ್ಕಾರದ ಇಲಾಖೆಗಳು ಈಗಾಗಲೇ ಅಗತ್ಯತೆಗಳನ್ನು ಪಾಲಿಸಿವೆ ಮತ್ತು ಪಿನ್ನುಮಾಡದ ಸ್ಥಿತಿಯಲ್ಲಿ ಮಾತ್ರವೇ ರಿಸರ್ವ್ ಬ್ಯಾಂಕಿನಲ್ಲಿ ನೋಟುಗಳನ್ನು ಸಲ್ಲಿಸುತ್ತಿವೆ.

ಅಲ್ಲದೆ, ಕೊಲ್ಕತ್ತದಲ್ಲಿರುವ ರಿಸರ್ವ್ ಬ್ಯಾಂಕು ಕಚೇರಿಯೇ, ನೋಟು ಪ್ಯಾಕೆಟ್‌ಗಳಿಗೆ ಪಿನ್ನು ಮಾಡಬಾರದೆಂಬುದಕ್ಕೆ ಸಂಬಂಧಿಸಿದಂತೆ ನಿರ್ದೇಶನವನ್ನು ಪಾಲಿಸುತ್ತಿಲ್ಲ ಎಂಬ ವಾದ ನಿಜವಲ್ಲ. ವಾಸ್ತವವಾಗಿ ರಿಸರ್ವ್ ಬ್ಯಾಂಕಿನಾದ್ಯಂತ ಇಡೀ ನಗದು ವ್ಯವಹಾರಗಳು, ಪಿನ್ನು ಮಾಡಿರದ ನೋಟುಗಳಲ್ಲಿ ಮಾತ್ರವೇ ನಡೆಯುತ್ತಿವೆ. ಹೊಸದಲ್ಲದ ಆದರೆ ಮತ್ತೆ ನೀಡಬಹುದಾದ ನೋಟುಗಳನ್ನು, ನೋಟು ಪ್ಯಾಕೆಟುಗಳನ್ನು ಅಡ್ಡಲಾಗಿ ಕಟ್ಟಿ, ಪಿನ್ನು ಮಾಡಿರದ ಸ್ಥಿತಿಯಲ್ಲಿ ಎಲ್ಲಾ ಕೌಂಟರ್‌ಗಳಲ್ಲಿಯೂ ರಿಸರ್ವ್ ಬ್ಯಾಂಕು ನೀಡುತ್ತಿದೆ. ಇದು, ಸರ್ಕಾರದ ಇಲಾಖೆಗಳು ಮತ್ತು ಸಾರ್ವಜನಿಕ ಸದಸ್ಯರೊಂದಿಗೆ ನಿರ್ವಹಣೆಗಳು ಮತ್ತು ವ್ಯವಹರಣೆಗಳಿಗೆ ಸಂಬಂಧಿಸಿದಂತೆ, ಇತರ ಬ್ಯಾಂಕ್‌ಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳು ಸಂಪೂರ್ಣವಾಗಿ ಈ ಕ್ರಮಗಳನ್ನು

ಅನುಸರಿಸುವ ಹಾಗೆ ತೆಗೆದುಕೊಳ್ಳಲಾದ ಅತ್ಯಂತ ಪ್ರಮುಖವಾದ ಕ್ರಮ. ಈ ವಿಷಯದ ಮೇಲಿನ ಆಕ್ಷೇಪಣೆಗಳು ಅನವಶ್ಯಕ ಮತ್ತು ಆಧಾರ ರಹಿತವಾದವುಗಳು. ಜೊತೆಗೆ, ನೋಟುಗಳಿಗೆ ಪಿನ್‌ಮಾಡುವ ಪದ್ಧತಿಯನ್ನು ನಿಲ್ಲಿಸುವ (ಮುಂದುವರೆಸದಿರುವ) ತೀರ್ಮಾನವನ್ನು, 1995ರಲ್ಲಿ ಭಾರತ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕು ಜಂಟಿಯಾಗಿ ತೆಗೆದುಕೊಂಡ್ಡಿದ್ದವು ಮತ್ತು 1996 ರಿಂದ ಕ್ರಮೇಣ ಅನುಷ್ಠಾನದಲ್ಲಿದೆ ಎಂಬುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿ, ಸರ್ಕಾರದ ಕೆಲವೊಂದು ಇಲಾಖೆಗಳು, ನೋಟುಗಳನ್ನು ಪಿನ್ನುಮಾಡಿದ ಸ್ಥಿತಿಯಲ್ಲಿಯೇ ನೀಡಬೇಕೆಂದು ಭಾರತೀಯ ಸ್ಟೇಟ್ ಬ್ಯಾಂಕನ್ನು ವಿನಂತಿಸಿವೆ ಎಂಬ ವಾದವು, ಸಮರ್ಥನೀಯವೆಂದು ಕಂಡುಬರುವುದಿಲ್ಲ. ಬ್ಯಾಂಕ್‌ಗಳ ಅಧ್ಯಕ್ಷರು, ಅನೇಕ ಸಭೆಗಳಲ್ಲಿ, ಸ್ವಚ್ಛ ನೋಟು ಕಾರ್ಯನೀತಿ ಮತ್ತು ಆರ್‌ಬಿಐ ನಿರ್ದೇಶನವನ್ನು ಕಾರ್ಯಗತಗೊಳಿಸುವಲ್ಲಿ ಅದರ ತುಂಬು ಹೃದಯದ ಬೆಂಬಲವನ್ನು ನೀಡುವುದಾಗಿ ಆರ್‌ಬಿಐಗೆ ಆಶ್ವಾಸನೆ ನೀಡಿದ್ದಾರೆ. ಎಸ್‌ಬಿಐ ಮತ್ತು ಇತರ ಬ್ಯಾಂಕ್‌ಗಳು, ಆರ್‌ಬಿಐ ಅಗತ್ಯಗಳನ್ನು ಅನುಸರಿಸಲು ಸಂಬಂಧಪಟ್ಟ ಇಲಾಖೆಗಳೊಂದಿಗೆ ಅದೇ ರೀತಿಯಲ್ಲಿ ಮುಂದುವರಿಯಬೇಕಾಗಿದೆ.

ಅಲ್ಲದೆ, ಆರ್‌ಬಿಐ ಹೊಸದಾದ ಮತ್ತು ಒಳ್ಳೆಯ ಗುಣಮಟ್ಟದ ಮತ್ತೆ ನೀಡಬಹುದಾದ ನೋಟುಗಳನ್ನು, ನಾಣ್ಯಗಳನ್ನು ದೇಶಾದ್ಯಂತ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದೆ ಮತ್ತು ಆರ್‌ಬಿಐನಲ್ಲಿ ನವೀಕರಿಸುವ ಮೂಲಕ ಇತ್ತೀಚಿನ ತಿಂಗಳುಗಳಲ್ಲಿ, ಚಲಾವಣೆಯಿಂದ ಸುಮಾರು 20 ಬಿಲಿಯನ್ ನೋಟುಗಳ ಪ್ರತ್ಯೇಕಿಸಿ ಸೂಕ್ತಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ಸರಬರಾಜು ಸರಪಳಿಯು ಮುಂದುವರಿಯುವಂತೆ, ಕರೆನ್ಸಿ ಚೆಸ್ಟ್‌ಅನ್ನು ನಿರ್ವಹಿಸುತ್ತಿರುವ ಬ್ಯಾಂಕ್‌ಗಳೊಂದಿಗೆ, ಭಾರತೀಯ ರಿಸರ್ವ್ ಬ್ಯಾಂಕು ನಿರಂತರ ಸಂವಾದದಲ್ಲಿದೆ.

ಬ್ಯಾಂಕ್‌ಗಳು ಪಿನ್ನುಮಾಡದ ಸ್ಥಿತಿಯಲ್ಲಿ ಮಾತ್ರವೇ ನೋಟುಗಳನ್ನು ಸ್ವೀಕರಿಸಬೇಕೆಂಬ ನಿರೀಕ್ಷೆ ಇರುವುದರಿಂದ ಡಬ್ಲ್ಯುಬಿಎಸ್‌ಇಬಿ, ಸಿಇಎಸ್‌ಸಿ, ಬಿಎಸ್‌ಎನ್‌ಎಲ್ ಮುಂತಾದುವುಗಳಂತಹ ಸರ್ಕಾರ ಮತ್ತು ಖಾಸಗಿಯ ಕೆಲವೊಂದು ಉದ್ಯಮಗಳು ಈಗಲೂ ಬ್ಯಾಂಕ್‌ಗಳಲ್ಲಿ ಪಿನ್ನುಮಾಡಿದ ನೋಟುಗಳನ್ನು ಇಡುತ್ತವೆ ಎಂಬುದು ಸಹಾ ಸರಿಯಲ್ಲ. ಸರಳವಾಗಿ ಕಟ್ಟುವ ಮೂಲಕ (ಸಮತಲವಾಗಿ ಮತ್ತು ಲಂಬವಾಗಿ) ಅಥವಾ ಮೊಹರು ಮಾಡಿದ ಪಾಲಿಥಿನ್ ಹಣದ ಚೀಲಗಳನ್ನು ಉಪಯೋಗಿಸುವ ಮೂಲಕ, ಸರ್ಕಾರದ ಮತ್ತು ಸಿಇಎಸ್‌ಸಿ ರೀತಿಯ ಇಲಾಖೆಗಳು ನಗದು ನಿರ್ವಹಿಸುವ ಶಾಖೆಗಳನ್ನು ನವೀಕರಿಸುವುದು ಅವಶ್ಯಕವಾಗಿದೆ. ಪಿನ್ನುಮಾಡುವುದು ನೋಟುಗಳನ್ನು ಹಾಳು ಮಾಡುತ್ತದೆ ಮತ್ತು ನೋಟುಗಳ ದೀರ್ಘಾಯಸ್ಸನ್ನು ಕಡಿಮೆ ಮಾಡುತ್ತದೆ, ಅವುಗಳ ತಯಾರಿಕೆಗಾಗಿ ಕಾಗದವನ್ನು ಆಮದು ಮಾಡಿಕೊಳ್ಳುವಲ್ಲಿ, ಗಣನೀಯ ಪ್ರಮಾಣದ ವಿದೇಶಿ ವಿನಿಮಯ ಹೊರಗೆ ಹೋಗುತ್ತದೆ ಎಂಬ ಈ ಅಂಶದ ಬಗ್ಗೆ ಸಾರ್ವಜನಿಕರಿಗೆ ತಿಳಿವಳಿಕೆ ನೀಡಬೇಕಾದ ಅಗತ್ಯತೆಯಿದೆ. ಬ್ಯಾಂಕ್‌ಗಳು, ಪಿನ್ನುಮಾಡದ ನೊಟುಗಳನ್ನು ಭದ್ರವಾಗಿಡಲು ವಿಶೇಷ ಮೊಹರು ಮಾಡಿದ ಪಾಲಿಥಿನ್ ಹಣದ ಚೀಲಗಳನ್ನು ಉಪಯೋಗಿಸಲು ಆಯ್ಕೆಯ ಅವಕಾಶವನ್ನು ಹೊಂದಿವೆ. ಅವುಗಳ ಬಳಕೆಯನ್ನು ಉದಾರವಾಗಿ ಹೆಚ್ಚಿಸುವ ಅಗತ್ಯತೆಯಿದೆ.

ಆರ್‌ಬಿಐ ನ ಸ್ವಚ್ಚ ನೋಟುಗಳ ಕಾರ್ಯನೀತಿಯು, ಸಾರ್ವಜನಿಕರ ಅನುಕೂಲಕ್ಕಾಗಿದೆ. ನೋಟುಗಳನ್ನು ಪಿನ್ನುಮಾಡದ ಸ್ಥಿತಿಯಲ್ಲಿ ಸ್ವೀಕರಿಸುವ ಹಾಗೆ ಮತ್ತು ಸಂದಾಯ ಮಾಡುವ ಹಾಗೆ, ಅದು, ಕರೆನ್ಸಿ ಪರಿಶೀಲನೆ ಮತ್ತು ಸಂಸ್ಕರಣ (ಸಿವಿಪಿಎಸ್) ವ್ಯವಸ್ಥೆಯನ್ನು ನಿಯೋಜಿಸಿದೆ. ಅಗತ್ಯವಾಗಿರುವುದೇನೆಂದರೆ, ಎಲ್ಲಾ ಹಂತಗಳಲ್ಲಿಯೂ, ಸಹಭಾಗಿತ್ವ ಮತ್ತು ಆಲೋಚನಾ ರೀತಿಯ ಬದಲಾವಣೆ.

ಅಜಿತ್ ಪ್ರಸಾದ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–2003/1246